ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

6ನೇ ವರ್ಷ 21ನೇ ಸಂಚಿಕೆ ಕೊಪ್ಪ 17-1-1988 ಭಾನುವಾರ ಬೆಲೆ 50 ಪೈಸೆ

ಕಾಫಿ ಮಂಡಳಿ ವತಿಯಿಂದ

ಬಿಳಿ ತಿಗಣೆ ಹತೋಟಿ ತರಬೇತಿ ಶಿಬಿರ

ಕೊಪ್ಪ : ಕಾಫಿ ಮಂಡಳಿ ಹಿರಿಯ ಸಂಪರ್ಕಾಧಿಕಾರಿ ಕಛೇರಿಯ ಆಶ್ರಯದಲ್ಲಿ ಕಾಫಿ ಸಂಶೋಧನಾ ಕೇಂದ್ರದ ಕೀಟ ಶಾಸ್ತ್ರ ವಿಜ್ಞಾನಿಗಳಾದ ಕೃಷ್ಣ ಮೂರ್ತಿ ಭಟ್, ನಾಗೇಶ್, ಭಾಸ್ಕರ ರೆಡ್ಡಿ ಇವರುಗಳಿಂದ ಕಾಫಿಯ "ವೈಟ್ ಬಗ್" (ಬಿಳಿ ತಿಗಣೆ) ಕೀಟದ ಜೈವಿಕ ಹತೋಟಿ ಬಗ್ಗೆ ಜ. 12 ರಂದು ಪ್ರಾತ್ಯಕ್ಷಿಕೆ ಮತ್ತು ತರಬೇತಿ ಶಿಬಿರ ಇಲ್ಲಿ ನಡೆಯಿತು.

ಅತಿಯಾದ ರಾಸಾಯನಿಕಗಳ ಸಿಂಪರಣೆಯಿಂದಾಗುವ ಭೀಕರ ಹಾನಿಯನ್ನು ತಡೆಗಟ್ಟಲು ಜೈವಿಕ ಹತೋಟಿ ವಿಧಾನ ಹೇಗೆ ಉಪಯುಕ್ತ ಎಂಬುದನ್ನು ಕೃಷ್ಣ ಭಟ್ ವಿವರಿಸಿ, ಮಲೆನಾಡಿನಲ್ಲಿ ಸರ್ವೇಸಾಮಾನ್ಯವಾಗಿ ಕಂಡುಬರುವ ಜಾತಿಯ ಬಿಳಿ ತಿಗಣೆಯನ್ನು ತನ್ನ ವಂಶಾಭಿವೃದ್ಧಿಗೆ ಬಳಸಿಕೊಳ್ಳುವ ಒಂದು ಬಗೆಯ 'ನುಸಿ'ಯನ್ನು ಅಭಿವೃದ್ಧಿ ಪಡಿಸಿದ್ದು. ಇದನ್ನು ರೈತರೇ ಹೇಗೆ 'ತಯಾರಿಸಿ'ಕೊಳ್ಳಬಹುದು ಎಂಬುದನ್ನೆಲ್ಲ ಪ್ರಾತ್ಯಕ್ಷಿಕೆಯೊಂದಿಗೆ ತಿಳಿಸಿದರು. ಇದರಿಂದ ಶೇ. 35 ರಿಂದ 40ರಷ್ಟು ಹತೋಟಿ ಸಾಧ್ಯ, ಇನ್ನೂ ಬೇಕಾದರೆ ಮಾತ್ರ ರಾಸಾಯನಿಕಗಳನ್ನು ಕ್ಲಪ್ತವಾಗಿ ಬಳಸಬೇಕು ಎಂದರು.

ಭಾಸ್ಕರ ರೆಡ್ಡಿ ಕೀಟ ಹರಡುವಿಕೆ ಬಗ್ಗೆ 'ಸ್ಲೈಡ್'ಗಳನ್ನು ಪ್ರದರ್ಶಿಸಿದರು.

ಸಹ್ಯಾದ್ರಿ ಬೆಳೆಗಾರರ ಸಂಘದ ಅಧ್ಯಕ್ಷರಾದ ಪಿ. ಜಿ. ಗುಜ್ಜರ್ ಮತ್ತು ಕಾಫಿ ಮಂಡಳಿ ಸದಸ್ಯ ಬಿ. ಪಿ. ರಮೇಶ್ ಮಾತನಾಡಿ, ಇಂಥ ಉತ್ತಮವಾದ ಕಾರ್ಯಕ್ರಮ ಇನ್ನೂ ಹೆಚ್ಚಾಗಿ ಹಳ್ಳಿಗಳನ್ನು ತಲುಪಬೇಕು ಎಂದು ಹೇಳಿ, ವಿಜ್ಞಾನಿಗಳ ಶ್ರಮವನ್ನು ಶ್ಲಾಘಿಸಿದರು.

ಶ್ರೀಕಾಂತ್ ಸ್ವಾಗತಿಸಿ, ರಾಜೇಂದ್ರ ವಂದಿಸಿದರು.

(ವರದಿ : ಎಂ. ಆರ್. ಭಾಸ್ಕರ್.)

87ರ ಡಿಸೆಂಬರ್ ಸಂಬಳ ಇನ್ನೂ ಸಿಕ್ಕಿಲ್ಲ, ಸದ್ಯ ಸಿಕ್ಕುವ ನಿರೀಕ್ಷೆಯೂ ಇಲ್ಲ!

ಸಂಬಳವಿಲ್ಲದ ಸಂಕ್ರಾಂತಿ : ಪ್ರೌಢಶಾಲಾ ನೌಕರರಿಂದ ಚಳುವಳಿಗೆ ಸಿದ್ಧತೆ

ಕೊಪ್ಪ :- ಚಿಕ್ಕಮಗಳೂರಿನ ಅನಕ್ಷ ಡಿಡಿಪಿಐ ಮತ್ತು ಅವರ ಕಛೇರಿಯ ಬೇಜವಾಬ್ದಾರಿಯ ಕಲ್ಲುಗೊಂಜಿಗಳಿಂದಾಗಿ ಜಿಲ್ಲೆಯ 15 ಪ್ರೌಢಶಾಲೆಗಳ ನೌಕರರಿಗೆ ಡಿಸೆಂಬರ್ ತಿಂಗಳ ಸಂಬಳ ಬಟವಾಡೆ ಆಗದೆ ಅವರು ಚಳುವಳಿಯ ಹಾದಿ ಹಿಡಿದಿದ್ದಾರೆ.

ಈಗಾಗಲೇ ಅವರು ಜಿಲ್ಲಾ ಪರಿಷತ್ ಅಧ್ಯಕ್ಷರಿಗೂ ಡಿಡಿಪಿಐಗೂ ಮನವಿಪತ್ರ ಸಲ್ಲಿಕೆ, 'ಕಾರ್ಡ್ ಚಳುವಳಿ' ಹಂತಗಳನ್ನು ಮುಗಿಸಿದ್ದು, ಈ ತಿಂಗಳ ಕೊನೆಯೊಳಗಾಗಿ ಈ ಅನ್ಯಾಯ ಶಾಶ್ವತವಾಗಿ ಬಗೆಹರಿಯುವ ಏರ್ಪಾಡಾಗದಿದ್ದರೆ ತೀವ್ರ ಸ್ವರೂಪದ ಚಳುವಳಿಯ ಬೆದರಿಕೆ ಹಾಕಿದ್ದಾರೆ.

ಎಳ್ಳು-ನೀರು !

'ಜನತಾ ಪಕ್ಷ ಕೋಟಿಗಟ್ಟಲೆ ರೂ. ಖರ್ಚಿನಲ್ಲಿ ವಿಜೃಂಭಣೆಯಿಂದ ತನ್ನ 5ನೇ 'ಹುಟ್ಟು ಹಬ್ಬ'ವನ್ನು ಆಚರಿಸುತ್ತಿದ್ದರೆ, ರಾಜ್ಯಾದ್ಯಂತ ಈ ಬಡ ಸಂಬಳಗಾರರು ಸಂಕ್ರಾಂತಿಯ ಎಳ್ಳು-ಬೆಲ್ಲಕ್ಕೂ 'ಎಳ್ಳು-ನೀರೇ ಗತಿ'ಯಾದ ಬಗ್ಗೆ ಬಹಳ ದುಃಖಗೊಂಡಿದ್ದು, ಪರಿಸ್ಥಿತಿ ತಿಳಿಯಾಗದಿದ್ದರೆ, ಮಕ್ಕಳ ಪರೀಕ್ಷೆ ಹತ್ತಿರ ಬಂದಿರುವ ಈ ಸಂದರ್ಭದಲ್ಲಿ ಬಹಳ ಅನರ್ಥಕರವಾದ ಪರಿಣಾಮ ಉಂಟಾಗಲಿದೆ.

ಹಿನ್ನೆಲೆ

ಈ ನೌಕರರಿಗೆಲ್ಲ ಜಿಲ್ಲಾ ಪರಿಷತ್ತು ಸಂಬಳ ವಿತರಿಸಬೇಕಾದರೆ ಡಿಡಿಪಿಐ ಕಛೇರಿ ಅದರ ವಿವರವಾದ ಬೇಡಿಕೆ ಸಲ್ಲಿಸಿ ಅಲಾಟ್‌ಮೆಂಟ್ ಹಾಕಬೇಕು. ಆದರೆ ಈವರೆಗೂ ಹೊಸ ಸ್ಕೇಲ್ ಪ್ರಕಾರ ಅಲಾಟ್‌ಮೆಂಟ್ ಕಳಿಸಿಲ್ಲ. ಕಳೆದ ಸೆಪ್ಟೆಂಬರ್‌ನಲ್ಲಿ ಇಂಥದೇ ಪರಿಸ್ಥಿತಿ ಉಂಟಾದಾಗಿನಿಂದ ಜಿಲ್ಲಾ ಪರಿಷತ್ ಈ ಬಗ್ಗೆ ಈ ಅಧಿಕಾರಿಗೆ ಪತ್ರಗಳನ್ನು ಬರೆದರೂ ಪ್ರಯೋಜನವಾಗಿಲ್ಲ.

ಈ ಅಧಿಕಾರಿ ತಪ್ಪಿನ ಹೊಣೆಯನ್ನು ಪದೇ ಪದೇ ಜಿ. ಪ. ಮೇಲೆ ಹೊರಿಸಿದಾಗ ಈ ಸಂಬಂಧದ ಸ್ಥಾಯೀ ಸಮಿತಿಯ ಅಧ್ಯಕ್ಷ ಚನ್ನಬಸಪ್ಪ ಮತ್ತು ನೌಕರರ ಸಂಘದ ಮುಖಂಡರು ಡಿಡಿಪಿಐಯನ್ನು ಕಂಡು, ಅವರ ಲೋಪವನ್ನು ತೋರಿಸಿಕೊಟ್ಟ ನಂತರ, ಅವರು ನಾಲ್ಕು ಮಂದಿ ಗುಮಾಸ್ತರಿಗೆ ಈ ಕೆಲಸವನ್ನು ವಹಿಸಿದ್ದು, ಅವರ ನಿರ್ಲಕ್ಷ್ಯವನ್ನು ಹತ್ತಿಕ್ಕಿ ಅವರಿಂದ ಈ ಕೆಲಸ ಮಾಡಿಸಲು ಡಿಡಿಪಿಐಗೆ ಸಾಧ್ಯವಾಗಿಲ್ಲ ಎನ್ನಲಾಗಿದೆ.

ಭರವಸೆ

ಜ. 14 ರಂದು ಜಿ. ಪ. ಕಾರ್ಯದರ್ಶಿಗಳನ್ನು ಸಹ ಈ ನೌಕರರು ಭೇಟಿ ಮಾಡಿದಾಗ ಈ ತಿಂಗಳ ಕೊನೆಯೊಳಗಾಗಿ ಅಲಾಟ್‌ಮೆಂಟ್ ತರಿಸಿಕೊಂಡು ಸಂಬಳ ವಿತರಿಸುವುದಾಗಿ ಅವರು ಭರವಸೆ ಕೊಟ್ಟಿದ್ದಾರೆ.

ಆದರೆ ಡಿಡಿಪಿಐ ಮತ್ತು ಅವರ ಸಿಬ್ಬಂದಿಯ ಅಮಾನುಷ ನಿರ್ಲಕ್ಷ್ಯ ರಿಪೇರಿಯಾಗದೆ ಈ ಸಮಸ್ಯೆ ಬಗೆಹರಿಯುವ ಲಕ್ಷಣವಿಲ್ಲ.

ಕೊಪ್ಪದಲ್ಲೊಂದು ಜಾತ್ಯತೀತ, ಸರಳ ವಿವಾಹ

ಕೊಪ್ಪ : ಇಲ್ಲಿನ ಪ್ರೀಮಿಯರ್ ಇರಿಗೇಶನ್ ಎಕ್ವಿಪ್‌ಮೆಂಟ್ಸ್ ಸಂಸ್ಥೆಯ ಉದ್ಯೋಗಿ, ಕೇರಳದ ಕೆ. ಅಬ್ರಹಾಂ ವರ್ಗೀಸ್ ಮತ್ತು ಹರಿಹರಪುರದ ಕ. ಜಿ. ಶಾರದಾ ಈಚೆಗೆ ರಜಿಸ್ಟರ್ ಮದುವೆ ಮಾಡಿಕೊಂಡಿದ್ದಾರೆ.

ವೈವಾಹಿಕ ಜೀವನಕ್ಕೆ ಕಾಲಿಡುವುದರ ಜೊತೆಗೆ ಜಾತಿ-ಮತಗಳ ಬೇಲಿಗಳನ್ನು ದಾಟಿ ಮನುಷ್ಯತ್ವದ ಬಯಲಿಗೆ ಪ್ರವೇಶಿಸಿರುವ ಈ ನೂತನ ದಂಪತಿಗಳಿಗೆ ಎಲ್ಲ ಜಾತ್ಯತೀತರ ಪರವಾಗಿ 'ಮುಂಜಾವು' ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತದೆ.

ಜೊತೆಗೆ ವಧುವಿನ ಹಿರಿಯ ಅಣ್ಣ, ಹರಿಹರಪುರ ಕಿರಿಯ ಕಾಲೇಜು ಉಪನ್ಯಾಸಕರಾದ ಕೆ. ಜಿ ಎನ್. ಶಾಸ್ತ್ರಿ ಅವರೂ ಈ ಕೆಳಗಿನಂತೆ ತಮ್ಮ ಶುಭಾಶಯಗಳನ್ನು ಕಳಿಸಿದ್ದಾರೆ : "ನನ್ನ ಸಹೋದರಿ ಚಿ। ಸೌ। ಶಾರದಾ ತನ್ನ ಬಾಳ ಸಂಗಾತಿಯನ್ನು ತಾನೇ ಆರಿಸಿಕೊಂಡು ಸರಳ ರೀತಿಯಲ್ಲಿ (ಅಂತರ ಜಾತಿ) ವಿವಾಹವಾಗಿರುವ ಸಂದರ್ಭದಲ್ಲಿ ನವ ವಧೂ ವರರಿಗೆ ನಮ್ಮ ಶುಭ ಹಾರೈಕೆಗಳನ್ನೂ ಈ ಮೂಲಕ ತಿಳಿಸ ಬಯಸುತ್ತೇನೆ."

ನಿವೇಶನ ವಂಚನೆ ಪ್ರಕರಣ : ಕೊಪ್ಪ ಪುರಸಭೆ ನಿರ್ಣಯಕ್ಕೆ ಹೈಕೋರ್ಟ್ ತಡೆಯಾಜ್ಞೆ

ಕೊಪ್ಪ : ನಿವೇಶನ ವಂಚನೆ ನಡೆಸಿದ್ದಾರೆಂದು ಇಲ್ಲಿನ ಪುರಸಭೆ ಶ್ರೀಮತಿ ನಜೀರ್ ಬಾನು ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಿ ಡಿ. 23 ರಂದು ಮಾಡಿರುವ ನಿರ್ಣಯವನ್ನು ಜಾರಿಗೆ ತರದಂತೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ನಜೀರ್ ಬಾನು ಪರವಾಗಿ ಪವರ್ ಆಫ್ ಅಟಾರ್ನಿ ಹೊಂದಿರುವ ಟಿ ಎಚ್ ಅಣ್ಣಪ್ಪ ನಾಯಕ್ ತಡೆಯಾಜ್ಞೆ ತಂದಿದ್ದಾರೆ.

ಎನ್ನೆಸ್ಸೆಸ್ ರಾಜ್ಯ ಶಿಬಿರ : ಸ್ಥಳೀಯರ ಉತ್ಸಾಹ

(ವರದಿ : ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ : ಗಿರಿಜನರ ಕ್ಷೇಮಾಭಿವೃದ್ಧಿಯ ಗುರಿಯೊಂದಿಗೆ ಇಲ್ಲಿಗೆ ಸಮೀಪದ ನೆಮ್ಮಾರಿನಲ್ಲಿ ಪದವಿಪೂರ್ವ ವಿದ್ಯಾರ್ಥಿನಿಯರ ರಾಜ್ಯಮಟ್ಟದ ಎನ್ನೆಸ್ಸೆಸ್ ಶಿಬಿರದ ಉದ್ಘಾಟನೆ ಜ. 9 ರಂದು ಅಂಕಿತ ಅತಿಥಿಗಳಾದ ಬಾಲಗಂಗಾಧರನಾಥ ಸ್ವಾಮಿಗಳು, ಜಿಲ್ಲಾಧಿಕಾರಿಗಳು, ಜಿ. ಪ. ಉಪ ಕಾರ್ಯದರ್ಶಿ ಇವರುಗಳು ಬಾರದೆಯೂ ಸ್ಥಳೀಯ ಮುಂದಾಳುಗಳಿಂದಲೇ ಚಂದದಲ್ಲಿ ನೆರವೇರಿತು.

ಕಜ್ಜೋಡಿ ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಇಂಜಿನಿಯರ್ ಸೋಮಶೇಖರ್ ಉದ್ಘಾಟಿಸಿದ ಕಾರ್ಯಕ್ರಮದಲ್ಲಿ ಎಂ.ಜಿ. ಸುಧಾಕರ ಹೆಗ್ಡೆ ಮತ್ತು ಜಿ. ಪ ಇಂಜಿನಿಯರ್ ವರ್ಧಮಾನ್ ಮುಖ್ಯ ಅತಿಥಿಗಳಾಗಿದ್ದರು.

ರಾಜ್ಯದ 17 ಜಿಲ್ಲೆಗಳ ವಿವಿಧ ಕಾಲೇಜುಗಳ ಆಯ್ದ 185 ವಿದ್ಯಾರ್ಥಿನಿಯರು ಭಾಗವಹಿಸುತ್ತಿರುವ 10 ದಿನಗಳ ಈ ಶಿಬಿರದಲ್ಲಿ ಆಹ್ವಾನ ಪತ್ರಿಕೆಗಳು ತಲುಪದಿರುವ [illegible] ನಡುವೆಯೂ ಇಡೀ ಊರಿನ ಜನತೆ ಉತ್ಸಾಹ, ಸಂಭ್ರಮಗಳಿಂದ ಪಾಲ್ಗೊಳ್ಳುತ್ತಿದ್ದಾರೆ.

ಕಿಸಾನ್ ನರ್ಸರಿಗೆ ಅರ್ಜಿ ಕೊಡಲು ಜ. 20 ಗಡುವು

ಕೊಪ್ಪ : ಈ ಹಿಂದೆ ಪ್ರಕಟಿಸಿರುವಂತೆ, ಕಿಸಾನ್ ನರ್ಸರಿ ಬೆಳೆಸಲು ಇಚ್ಛೆಯುಳ್ಳವರು ತಮ್ಮ ಅರ್ಜಿಗಳನ್ನು ಮಂಡಲ ಪ್ರಧಾನರಿಗೆ ದಿನಾಂಕ 20-1-88 ರೊಳಗಾಗಿ ಸಲ್ಲಿಸಬೇಕು ; ಅನಂತರ ಕೊಟ್ಟ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ವಲಯ ಅರಣ್ಯಾಧಿಕಾರಿ ತಿಳಿಸಿದ್ದಾರೆ.

ಕೊಪ್ಪ, ಶೃಂಗೇರಿ, ನ. ರಾ. ಪುರ ಮಂಡಲ ಪಂಚಾಯ್ತಿಗಳಿಗೆ ಫೆ. 21ಕ್ಕೆ ಚುನಾವಣೆ

ಕೊಪ್ಪ : 'ಮಾಜೆ' [illegible] ಕೊಪ್ಪ, ಶೃಂಗೇರಿ, ನ ರಾ. ಪುರ ಮಂಡಲಗಳಿಗೆ ಫೆ. 21 ರಂದು ಚುನಾವಣೆ ನಡೆಯಲಿದೆ. ಇದಕ್ಕಾಗಿ ಈವರೆಗೆ [illegible] (ವಿಭಾಗ)ಗಳನ್ನು ಪುನರ್‌ರಚಿಸಲಾಗಿದೆ ಹಾಗೂ ಕೊಪ್ಪ, ಶೃಂಗೇರಿ [illegible] ಸ್ಥಾನಗಳನ್ನು ಕ್ರಮ 15ರಿಂದ 11 [illegible] 10ಕ್ಕೆ ಇಳಿಸಲಾಗಿದೆ.

ನ ರಾ. ಪುರ : 7 ಸಾಮಾನ್ಯ [illegible] ಮಹಿಳೆಯರಿಗೆ 5 ಸ್ಥಾನ (ಅದರಲ್ಲಿ 2 [illegible] ಜಾತಿ/ವರ್ಗದ ಮಹಿಳೆಯರಿಗೆ) [illegible] ಪ. ಜಾತಿ/ವರ್ಗದ ಮೀಸಲು [illegible] (ಕ್ರಮ 3 ವಾರ್ಡ್‌ಗಳನ್ನು [illegible] 5 [illegible] ಗಳಿಂದ ಒಟ್ಟು 15 ಸ್ಥಾನ)

ಕೊಪ್ಪ : 11ರಲ್ಲಿ 6 ಸಾಮಾನ್ಯ, [illegible] ಮಹಿಳೆಯರಿಗೆ (1 ಪ. ಜಾತಿ/ವರ್ಗ [illegible]) ಮತ್ತು 2 ಪ. ಜಾತಿ/ವರ್ಗದ [illegible] (5 ವಿಭಾಗಗಳು)

ಶೃಂಗೇರಿ : 5 ಸಾಮಾನ್ಯ, 3 [illegible] ಯರಿಗೆ (ಪ. ಜಾತಿ/ವರ್ಗದ 1) [illegible] ಪ. ಜಾತಿ/ವರ್ಗದ ಮೀಸಲು [illegible]

ಓದುಗರ ಪತ್ರಗಳು

ಅಂಚೆ ಚೀಲದ ಬಗ್ಗೆ ನಿರ್ಲಕ್ಷ್ಯಕ್ಕೆ ಪ್ರತಿಭಟನೆ

ಮಾನ್ಯರೆ,

ಬಾಳೆಹೊನ್ನೂರಿನಿಂದ ಪ್ರತಿದಿನ ಬನ್ನೂರಿಗೆ ಅಂಚೆ ಚೀಲ ಮಧ್ಯಾಹ್ನ 2-30ಕ್ಕೆ ಶಂಕರ್ ಸಾರಿಗೆ ಸಂಸ್ಥೆಯ ಶಿವಮೊಗ್ಗ-ಕೊಟ್ಟಿಗೆಹಾರ ಬಸ್ಸಿನಲ್ಲಿ ಬರುತ್ತಿದ್ದು, ಹಲವು ಬಾರಿ ಡ್ರೈವರ್-ಕಂಡಕ್ಟರ್‌ಗಳ ನಿರ್ಲಕ್ಷ್ಯದಿಂದಾಗಿ ಚೀಲ ಬಾರದಿರುವುದು, ಸಾವಿರಾರು ರೂ. ಬೆಲೆಯ ವಸ್ತುಗಳಿರುವ ಚೀಲವನ್ನು ಬನ್ನೂರು ಮತ್ತು ಬಾಳೆಹೊನ್ನೂರಿನಲ್ಲಿ ಅಂಚೆ ಕಛೇರಿಯ ಹತ್ತಿರ ರಸ್ತೆಯಲ್ಲಿ ಎಸೆದು ಹೋಗುವುದು ಮುಂತಾದ ಬೇಜವಾಬ್ದಾರಿತನಗಳನ್ನು ಪ್ರತಿಭಟಿಸಿ, ಜ. 6ರಂದು ಬನ್ನೂರಿನ ಜನ ಅಖಿಲ ಭಾರತ ಕಿಸಾನ್ ಸಭಾ ಮತ್ತು ಮಂ. ಪಂ. ಸದಸ್ಯರ ನೇತೃತ್ವದಲ್ಲಿ ಸದರಿ ಬಸ್ಸನ್ನು ತಡೆದು ಕಂಡಕ್ಟರ್ ಮತ್ತು ಡ್ರೈವರ್ ಇನ್ನು ಮುಂದೆ ಹೀಗೆ ಮಾಡುವುದಿಲ್ಲವೆಂದು ಒಪ್ಪಿಕೊಂಡ ನಂತರ ಬಸ್ಸನ್ನು ಹೋಗಲು ಬಿಟ್ಟರು.

ಸಂಸ್ಥೆಯವರು ಸಹ ತಮ್ಮ ಸಿಬ್ಬಂದಿಗೆ ಈ ಬಗ್ಗೆ ಸರಿಯಾಗಿ ಸೂಚನೆ ಕೊಡಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ

—ಬಿ. ಡಿ. ಶ್ರೀನಿವಾಸ್, ಬನ್ನೂರು.

ಶೃಂಗೇರಿ ಕ್ರಿಕೆಟ್ ಟೂರ್ನಿ: ಕೊಪ್ಪ ತಂಡಕ್ಕೆ ಜಯ

ಶೃಂಗೇರಿ: ಇಲ್ಲಿ ಜ. 2ರಿಂದ 10ರವರೆಗೆ ನಡೆದ ಕ್ರಿಕೆಟ್ ಟೂರ್ನಿಯಲ್ಲಿ ಕೊಪ್ಪದ ಫ್ರೆಂಡ್ಸ್ ಕ್ರಿಕೆಟ್ ಅಸೋಸಿಯೇಶನ್ ತಂಡ ತೀರ್ಥಹಳ್ಳಿಯ ಸಿಟಿ ಕ್ರಿಕೆಟರ್ಸ್ ವಿರುದ್ಧ 18 ರನ್ನುಗಳ ರೋಮಾಂಚಕ ಜಯ ಪಡೆಯಿತು. ಕೊಪ್ಪದ ಕೆ ಎನ್. ಬಾಲಚಂದ್ರ 33 ರನ್ ಗಳಿಸಿದರೆ, ರಮೇಶ್ ಪಟೇಲ್ 5 ವಿಕೆಟ್ ಪಡೆದರು. ತೀರ್ಥಹಳ್ಳಿಯ ಸುಧೀರ್ 26 ರನ್ ಗಳಿಸಿದರು. ಸ್ಕೋರ್: ಕೊಪ್ಪ— 36.4 ಓವರ್‌ಗಳಲ್ಲಿ 157 ರನ್; ತೀರ್ಥಹಳ್ಳಿ— 36.5 ಓವರ್‌ಗೆ 139 ರನ್.

ಬೆಳ್ತಂಗಡಿಯಲ್ಲಿ ರಬ್ಬರು ಬೆಳೆ ವಿಸ್ತರಣಾ ವಿಚಾರ ಸಂಕಿರಣ

ಬೆಳ್ತಂಗಡಿ: ಕರ್ನಾಟಕ ರಬ್ಬರು ಕೃಷಿಕರ ಸಂಘದ ಆಶ್ರಯದಲ್ಲಿ ಜ. 21 ರಂದು ಇಲ್ಲಿ ರಬ್ಬರು ಬೆಳೆ ವಿಸ್ತರಣಾ ವಿಚಾರ ಸಂಕಿರಣವೊಂದು ಏರ್ಪಾಡಾಗಿದೆ. ಇದರಲ್ಲಿ ರಬ್ಬರ್ ಬೋರ್ಡ್, ಇಂಡಿಯನ್ ಪೊಟ್ಯಾಶ್ ಹಾಗೂ ಪೈರೈಟಿಸ್-ಫಾಸ್ಫೇಟ್ಸ್ ಅಂಡ್ ಕೆಮಿಕಲ್ಸ್ ಇವುಗಳ ತಜ್ಞರು ಹಾಗೂ ರಬ್ಬರು ಕೃಷಿಕರ ಸಂಘದ ಅನುಭವಿಗಳು ಭಾಗವಹಿಸಲಿದ್ದಾರೆ. ಪ್ರವೇಶಧನ 5 ರೂ. ಇದ್ದು [illegible]ನ್ನು 19 ರೊಳಗೆ ಸಂಘಕ್ಕೆ ಕಳಿಸಿ [illegible] ನೊಂದಾಯಿಸಿಕೊಳ್ಳಬೇಕು.

ವಾರ್ತಾ ಇಲಾಖೆಯ ಅಸಡ್ಡೆ ಪ್ರದರ್ಶನ

ಮಾನ್ಯರೆ,

ಇತ್ತೀಚೆಗೆ ಇಲ್ಲಿ ಜಿಲ್ಲಾ ವಾರ್ತಾ ಇಲಾಖೆ ಮತ್ತು ಜಿಲ್ಲಾ ಆರೋಗ್ಯ ಇಲಾಖೆಯ ವತಿಯಿಂದ ಕರ್ನಾಟಕ ಸರ್ಕಾರದ ಐದು ವರ್ಷಗಳ ಸಾಧನೆಯ ವಿಶೇಷ ಪ್ರಚಾರ ಆಂದೋಲನ ಏರ್ಪಡಿಸಲಾಗಿತ್ತು. ಇವರು ಕಾರ್ಯಕ್ರಮ ಏರ್ಪಡಿಸಿದ್ದ ರೀತಿ ನೋಡಿದರೆ ಇವರಿಗೆ ಹೇಳುವವರು, ಕೇಳುವವರು ಯಾರು ಇಲ್ಲವೆ? ಅನ್ನಿಸುತ್ತದೆ.

ಕೇವಲ 10 ರಿಂದ 20ರೊಳಗೆ ಇದ್ದ ಜನರಿಗೆ ಇವರು ಪ್ರಚಾರ ಮಾಡಿದರು. ಯಾವುದೇ ಪೂರ್ವಭಾವಿ ಪ್ರಚಾರ ಇಲ್ಲದೆ ದಿಢೀರನೆ ಈ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಸ್ಥಳೀಯ ಮುಖಂಡರಿಗೂ ಇದು ಗೊತ್ತಿರಲಿಲ್ಲ. ಆಯ್ದ ಕೆಲವೇ ಮಂದಿಗೆ ತಿಳಿಸಿ ಗುಟ್ಟಿನಲ್ಲಿ ಮಾಡಿದಂತೆ ಈ ಕಾರ್ಯಕ್ರಮ ಏರ್ಪಡಿಸುವ ತುರ್ತು ಏನಿತ್ತು? ಇದು ಯಾವ ರೀತಿಯ ಕರ್ನಾಟಕ ಸರ್ಕಾರದ ಸಾಧನೆಯ ಪ್ರಚಾರ? ಸಂಬಂಧಪಟ್ಟವರು ಉತ್ತರಿಸಿಯಾರೆ?

ಸ್ವಾಗತ ಭಾಷಣ ಮಾಡಿದ ಜಿಲ್ಲಾ ವಾರ್ತಾಧಿಕಾರಿಯವರು ಈ ಕಾರ್ಯಕ್ರಮಕ್ಕೆ ಸರ್ಕಾರದಿಂದ ಒಂದು ಪೈಸೆ ಹಣವನ್ನು ನಾವು ಖರ್ಚು ಮಾಡುವುದಿಲ್ಲ ಅಂದರು. ಹಾಗಾದರೆ ಈ ಕಾರ್ಯಕ್ರಮಕ್ಕೆ ಇವರು ಇವರ ಸ್ವಂತ ಹಣ ಖರ್ಚು ಮಾಡಿದರೆ? ಇವರು ಖರ್ಚು ಮಾಡುತ್ತಿರುವುದು ಸಾರ್ವಜನಿಕ ಹಣ ಅಲ್ಲವೆ? ಆರೋಗ್ಯ ಇಲಾಖೆ ಈ ಕಾರ್ಯಕ್ರಮದ ಜೊತೆಗೂಡುವಾಗ ಸ್ಥಳೀಯ ಆರೋಗ್ಯ ಘಟಕಕ್ಕೆ ತಿಳಿಸಿರಲಿಲ್ಲವೆ ಅಥವಾ ಇವರದೂ ಬೇಜವಾಬ್ದಾರಿಯೆ

ಇಷ್ಟು ಗತಿಗೆಟ್ಟ, ಬೇಜವಾಬ್ದಾರಿಯ ವಿಶೇಷ ಪ್ರಚಾರ ಯಾರಿಗಾಗಿ? ಜಿಲ್ಲಾ ಉಪಾಧ್ಯಕ್ಷರೂ ಇಂತಹ ಒಂದು ಸಭೆಯಲ್ಲಿ ಭಾಗವಹಿಸಿದ್ದು ವಿಷಾದನೀಯ. ಈ ಆಂದೋಲನದ ಅಧಿಕಾರಿಗಳಿಗೆ ಈ ಅವ್ಯವಸ್ಥೆಯ ಬಗ್ಗೆ ಅವರು ಯಾವುದೇ ಸೂಚನೆ ನೀಡದಿದ್ದುದು ಮತ್ತೂ ಬೇಸರದ ಸಂಗತಿ.

ಸರಿಯಾದ ಪ್ರಚಾರ ಇಲ್ಲದ ಇಂಥ ಗುಟ್ಟಿನ ಕಾರ್ಯಕ್ರಮಗಳು ತಕ್ಷಣ ಕೊನೆಗೊಂಡು ಸರಿಯಾದ ರೀತಿ ನಡೆಯಲಿ.

—ಕೃಷ್ಣ ಭಂಡಾರಿ,
ಕಾರ್ಯದರ್ಶಿ, ಜಯಪುರ
ಮಂಡಲ್ ಜನತಾ ಪಕ್ಷ.

ಮುಖ್ಯಮಂತ್ರಿ ನಿಧಿಯಿಂದ 1000 ರೂ. ಪರಿಹಾರ

ಕೊಪ್ಪ: ಇಲ್ಲಿಗೆ ಸಮೀಪದ ಊರುಗುಡಿಗೆ ವಾಸಿ ಲಕ್ಷ್ಮಮ್ಮ ಎಂಬವರಿಗೆ ಕ್ಷಯ ರೋಗದ ಚಿಕಿತ್ಸೆಗಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಮಂಜೂರಾಗಿದ್ದ 1000 ರೂ. ಸಹಾಯಧನ ಚೆಕ್ಕನ್ನು ಜ. 12 ರಂದು ಶಾಸಕ ಗೋವಿಂದ ಗೌಡರು ಆಕೆಗೆ ನೀಡಿದರು. ತಹಸೀಲ್ದಾರ್ ಶ್ರೀನಿವಾಸ್ ಹಾಜರಿದ್ದರು.

ಸಂತಾಪ

ಕೊಪ್ಪ ಶಂಕರ್ ಸಾರಿಗೆ ಸಂಸ್ಥೆಯಲ್ಲಿ ಚಾಲಕರಾಗಿ ಕೆಲಸ ಮಾಡುತ್ತಿದ್ದ ನಾಗಪ್ಪ ಹೆಗ್ಡೆಯವರು ಜ. 15ರಂದು ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದಾಗ ಎಡವಿ ಬಿದ್ದ ಪರಿಣಾಮವಾಗಿ ಮೃತರಾದರು. ಪತ್ನಿ, ಮಕ್ಕಳು ಮತ್ತು ಅಪಾರ ಬಂಧು ವರ್ಗವನ್ನು ಅಗಲಿರುವ ಹೆಗ್ಡೆಯವರ ನಿಧನಕ್ಕೆ ಶಂಕರ್ ಸಾರಿಗೆ ಸಂಸ್ಥೆಯ ಕಾರ್ಮಿಕರ ಸಂಘ (ಎ ಐ ಟಿ.ಯು.ಸಿ.) ತೀವ್ರ ಸಂತಾಪ ವ್ಯಕ್ತಪಡಿಸಿದೆ.

ಚಂದಾ ಹಣ ಕಳಿಸಿ
ಸಹಕರಿಸಿ
ವಾರ್ಷಿಕ ಚಂದಾ 25 ರೂ.

ಬೆಳವಿನಕೊಡಿಗೆ ರಸ್ತೆಗೆ ಟಾರು ಹಾಕಿಸಿದ್ದಕ್ಕೆ ಅಭಿನಂದನೆ

ಕೊಪ್ಪ: ಈ ತಾಲ್ಲೂಕಿನ ಬಿ.ಜಿ. ಕಟ್ಟೆ ಅಗಳಗಂಡಿ ಮಧ್ಯದ ರಸ್ತೆಯ ಬೆಳವಿನ ಕೊಡಿಗೆ ಸಮೀಪದಲ್ಲಿ ವಾಹನಗಳ ಸಂಚಾರಕ್ಕೆ ಬಹಳ ಅಪಾಯಕಾರಿ ಎನ್ನಿಸಿದ್ದ ಕಡಿದಾದ ಇಳಿಜಾರಿನಲ್ಲಿ ಸುಮಾರು 1 ಕಿ.ಮೀ. ದೂರಕ್ಕೆ ಲೋಕೋಪಯೋಗಿ ಇಲಾಖೆ ಟಾರು ಹಾಕಿಸುತ್ತಿದ್ದು, ಗ್ರಾಮಸ್ಥರ ಮ[illegible]ರು ವರ್ಷಗಳ ಈ ಬೇಡಿಕೆಯನ್ನು ಈಡೇರಿಸಿದ್ದಕ್ಕೆ ಮಂಡಲ ಪಂಚಾಯ್ತಿ ಸದಸ್ಯ ಬಿ.ಕೆ. ರಮೇಶ್ ಇಲಾಖೆಗೆ ಅಭಿನಂದನೆ ಸಲ್ಲಿಸಿದ್ದಾರೆ.

ಕೊಪ್ಪ: ಮಾರ್ಗಸೂಚಿಗಳನ್ನು ಸ್ಥಾಪಿಸಿ

ಮಾನ್ಯರೆ,

ಪ್ರಖ್ಯಾತ ಪ್ರೇಕ್ಷಣೀಯ ಸ್ಥಳಗಳಾದ ಶೃಂಗೇರಿ, ಆಗುಂಬೆ ಮುಂತಾದ ಕಡೆಗಳಿಗೆ ಹೋಗುವ ಪ್ರವಾಸಿಗರು ಕೊಪ್ಪದ ಮೂಲಕವೇ ಹಾದು ಹೋಗುತ್ತಿರುತ್ತಾರೆ. ನಮ್ಮ ಈ ಊರಿನಲ್ಲಿ, ಹೊರಗಡೆಯಿಂದ ಬಂದು ಮುಂದಿನ ಊರುಗಳಿಗೆ ಹೋಗುವ ಪ್ರವಾಸಿಗರಿಗೆ ಅನುಕೂಲವಾಗುವಂತೆ ಯಾವ ಸ್ಥಳದಲ್ಲೂ ಮಾರ್ಗ ಸೂಚಿ ಫಲಕಗಳನ್ನು ಸ್ಥಾಪಿಸಿರುವುದಿಲ್ಲ. ಪ್ರಯಾಣಿಕರು ಹಲವಾರು ಸಾರಿ ಯಾವುಯಾವುದೋ ದಾರಿಯಲ್ಲಿ ಹೋಗಿ ತೊಂದರೆಗೆ ಸಿಲುಕುವುದು ಸಾಮಾನ್ಯ ಸಂಗತಿಯಾಗಿದೆ. ಪರಭಾಷಾ ಪ್ರದೇಶಗಳಿಂದ ಬಂದವರಂತೂ ದಾರಿ ಪೋಕರಿಂದ ಸರಿಯಾಗಿ ತಿಳಿಯಲಾಗದೆ, ಮಾರ್ಗ ಸೂಚಿಗಳನ್ನು ಕಾಣಲಾಗದೇ ಬವಣೆ ಪಡುತ್ತಿರುತ್ತಾರೆ.

ಆದ್ದರಿಂದ ಈ ಬಗ್ಗೆ ಸಂಬಂಧಪಟ್ಟವರು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಂಡು ಕೊಪ್ಪ ಪೇಟೆಯಲ್ಲಿ ಅಗತ್ಯವಿರುವ ಎಲ್ಲ ಸ್ಥಳಗಳಲ್ಲೂ ಮಾರ್ಗ ಸೂಚಿಗಳನ್ನು ಸ್ಥಾಪಿಸಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಿಕೊಡಬೇಕಾಗಿ ಈ ಮೂಲಕ ಕೋರುತ್ತೇವೆ.

—ನಾಗರಿಕರು, ಕೊಪ್ಪ

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪಿಕ ಆಫ್‌ಸೆಟ್, ಕೊಪ್ಪ